**ಓ.ಎಸ್ ನಂಃ 7/2021**

**ಪಿ.ಡಬ್ಲು–*2***

ಸಾಕ್ಷಿಯನ್ನು ದಿನಾಂಕಃ 06.06.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ– ಪ್ರತಿವಾದಿಯ ಪರ ಶ್ರೀ. ಪಿ ಎಂ ಎಸ್ ವಕೀಲರಿಂದಃ–**

ಈ ದಾವೆಯನ್ನು ವಾದಿಯು ಪ್ರತಿವಾದಿ ವಿರುದ್ದ ಅವರಿಗೆ ಕೊಟ್ಟಿದ್ದನ್ನು ಬಿಟ್ಟು ಉಳಿದ ಆಸ್ತಿ ನಮ್ಮದು ಎಂದು ಹಾಕಿರುತ್ತಾರೆ. ದಾವಾ ಐಟಂ ನಂ 1 ಮನೆ ಆಗಿರುತ್ತದೆ. ಸದರಿ ಮನೆಯ ಅಸಸೆಮೆಂಟ್ ನಂ. 1817 ಸದರಿ ಆಸ್ತಿಯ ವಿಸ್ತೀರ್ಣ ಉ–ದ 43 ಅಡಿ ಮತ್ತು ಪೂ –ಪ 20 ಅಡಿ. ದಾವಾ ಐಟಂ ನ 2 ತೋಟ ಅದರ ಸರ್ವೆ ನಂ. 389. ವಿಸ್ತೀರ್ಣ 1 ಎಕರೆ 16 ಗುಂಟೆ. ಸದರಿ ದಾವಾ ಜಮೀನು ಈಗ ಯಾರ ಹೆಸರಿನಲ್ಲಿ ದಾಖಲೆಗಳು ಇದೇ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನಿನ ಪಹಣಿ ಈಗ ಯಾರ ಹೆಸರಿನಲ್ಲಿ ಇದೇ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳು ಈಗ ಪ್ರತಿವಾದಿ ಹಾಗೂ ಕುಟುಂಬ ಸದಸ್ಯರ ಹೆಸರಿನಲ್ಲಿ ಇದ್ದು ಅವರ ಸ್ವಾಧೀನದಲ್ಲಿರುತ್ತಾರೆ ಎಂದರೆ ವಾದಿ ಸ್ವಾಧೀನಲ್ಲಿರುತ್ತಾರೆ.

ದಾವಾ ಜಮೀನಿನ ಚೆಕ್ಕು ಬಂದಿ ಪೂ–ಕ್ಕೆ ಖಾಸೀಂ ಸಾಬಿ, ಪ–ಖರಬು ರಸ್ತೆ, ಉ–ಕ್ಕೆ ರಾಮುಜಮ್ಮ ಮತ್ತು ದ–ಕ್ಕೆ ಉಸೇನ್ ಸಾಬ್ . ಸದರಿ ಖಾಸೀಂ ಸಾಬಿ ರವರ ಜಮೀನಿನ ಸರ್ವೆ ನಂ ಹಾಗೂ ವಿಸ್ತೀರ್ಣ ಏನು ಎಂದರೆ ಗೊತ್ತಿಲ್ಲ. ಸದರಿ ರಾಮುಜಮ್ಮ ಹಾಗೂ ಉಸೇನ್ ಸಾಬೀ ರವರ ಜಮೀನಿನ ಸರ್ವೆ ನಂ ಹಾಗೂ ವಿಸ್ತೀರ್ಣ ಏನು ಎಂದರೆ ಗೊತ್ತಿಲ್ಲ. ಪ್ರತಿವಾದಿ ಯಾರ ಊರಿನವರು ಎಂದರೆ ಮುತ್ತಕಪಲ್ಲಿ ಗ್ರಾಮದವರು. ಅವರು ಈಗ ಅಗರ ಗ್ರಾಮದಲ್ಲಿ 40 ವರುಷಗಳಿಂದ ವಾಸವಾಗಿರುತ್ತಾರೆ. ದಾವಾ ಐಟಂ ನಂ 1 ಜಮೀನು ಹಿಂದೆ ಅಗರ ಗ್ರಾಮದ ವಾಸ ಆದ ಚೋಟಿಮ ಅಲಿಯಾಸ್ ಅಲಿಯಾಮ್ ಬಿ ರವರ ಸ್ವತ್ತು ಆಗಿತ್ತು ಎಂದರೆ ಸರಿ. ಚೋಟಿಮ ಅಲಿಯಾಸ್ ಅಲಿಯಾಮ್ ಬಿ ರವರು ಜೀವಾಂತವಾಗಿದ್ದಾಗ ದಿಃ 03.12.1986 ರಲ್ಲಿ ಪ್ರತಿವಾದಿಗೆ ದಾವಾ ಐಟಂ 1 ನ್ನು ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಮನೆ ಮಾತ್ರ ಮಾರಾಟ ಮಾಡಿರುತ್ತಾರೆ. ದಿಃ 26.12.1991 ರಲ್ಲಿ ಚೋಟಿಮ ಅಲಿಯಾಸ್ ಅಲಿಯಾಮ್ ಬಿ ರವರು ಪ್ರತಿವಾದಿಗೆ ದಾವಾ ಐಟಂ ನಂ 2 ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಮನೆ ಮಾರಾಟ ಮಾಡಿದ್ದು ಜಮೀನು ಮಾರಾಟ ಮಾಡಿರುವ ಬಗ್ಗೆ ಗೊತ್ತಿಲ್ಲ. ಕ್ರಯ ಪತ್ರದ ದಿನವೇ ದಾವಾ ಐಟಂ 2 ರ ಸ್ವಾಧೀನವನ್ನು ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಅರ್ದ ಭಾಗ ಬಿಟ್ಟುಕೊಟ್ಟಿರುತ್ತಾರೆ. ಸದರಿ ಅರ್ದ ಭಾಗ ಅಸಸೆಮೆಂಟ್ ನಂ ಏನು ಎಂದರೆ 1817 ಅದರ ವಿಸ್ತೀರ್ಣ 20 x 43 ಅಡಿ. ಸದರಿ ಆಸ್ತಿ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ.

ವಾದಿಯ ಹೆಸರಿನಲ್ಲಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ಹೇಳುವ ಮೊದಲು ನಾನು ನೋಡಿರುತ್ತೇನೆ. ವಾದಿಯ ಹೆಸರಿನಲ್ಲಿರುವ ಆಸ್ತಿಯಲ್ಲಿ ಸ್ವಲ್ಪ ಭಾಗದಲ್ಲಿ ಮನೆ ಹಾಗೂ ಸ್ವಲ್ಪ ಖಾಲಿ ಜಾಗ ಇದೆ. ವಾದಿಯ

ಹೆಸರಿನಲ್ಲಿರುವ ಆಸ್ತಿಯ ಚೆಕ್ಕು ಬಂದಿ ಉತ್ತರಕ್ಕೆ ಲಾಲೀ ಸಾಬೀ, ದ-ಕ್ಕೆ ಪ್ರತಿವಾದಿ, ಪೂ-ಕ್ಕೆ ರಸ್ತೆ ಮತ್ತು ಪ-ಕ್ಕೆ ಚಂಗಯ್ಯ ಶೆಟ್ಟಿ . ಸದರಿ ಚೆಕ್ಕು ಬಂದಿಯನ್ನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ಪ್ರತಿವಾದಿ ಹೆಸರಿಲ್ಲಿರುವ ಆಸ್ತಿ ವಿಸ್ತೀರ್ಣ ಏನು ಎಂದರೆ 43 x10 ಅಡಿ. ಪ್ರತಿವಾದಿ ಆಸ್ತಿಯ ಚೆಕ್ಕು ಬಂದಿ ಪೂ -ಕ್ಕೆ ರಸ್ತೆ, ಪ-ಕ್ಕೆ ಚಂಗಯ್ಯ ಶೆಟ್ಟಿ, ಉ-ಕ್ಕೆ ಲಾಲೀ ಸಾಬೀ ಮತ್ತು ದ-ಕ್ಕೆ ಬಾಷು ಸಾಬೀ. ನನ್ನ ಮನೆ ಭಾಷು ಸಾಬೀ ರವರ ಮನೆಯ ಹತ್ತಿರದಲ್ಲಿ ಬರುತ್ತದೆ. ನಾನು ಊರುನ್ನು ಬಿಟ್ಟು 20 ವರುಷ ಆಗಿರುತ್ತದೆ. ನಮ್ಮ ಮನೆಯ ಅಸಸೆಮೆಂಟ್ ನಂ ಗೊತ್ತಿಲ್ಲ. ನಾನು ಕಳೆದ 20 ವರುಷಗಳಿಂದ ಸೀಗೇನಹಳ್ಳಿಯಲ್ಲಿ ವಾಸವಾಗಿದ್ದೇನೆ.

ಅಗರ ಗ್ರಾಮದಲ್ಲಿ ನಿಮಗೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಹೆಸರಿನಲ್ಲಿ ಯಾವುದೇ ಆಸ್ತಿ ಹಾಗೂ ಮನೆ ನಂ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಅರ್ದ ಭಾಗದಲ್ಲಿ ವಾದಿ ಹಾಗೂ ಉಳಿದ ಅರ್ದ ಭಾಗದಲ್ಲಿ ಪ್ರತಿವಾದಿ ಇರುತ್ತಾರೆ ಎಂದು ಸುಳ್ಳು ಹೇಳುತ್ತಿನೆಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ವಾದಿಯ ಮಾತುಕತೆ ಕೇಳಿ ಸುಳ್ಳು ಸಾಕ್ಷಿ ನುಡಿಯುಿತ್ತಿನೆಂದರೆ ಸರಿಯಲ್ಲ. ನಾನು ಕಳೆದ ತಿಂಗಳು ಅಸಲು ದಾವೆ ನಂ 235/2021 ರಲ್ಲಿ ಇನಾಯಿತ್‌ವುಲ್ಲಾ ಪರವಾಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಸಹ ವಾದಿ ಸಾಕ್ಷಿ ನುಡಿಯುವಂತೆ ಕರೆದುಕೊಂಡು ಬಂದಿದರು ಎಂದರೆ ಸರಿ. ದಾವಾ ಐಟಂ ನಂ 2 ಈಗ ಪ್ರತಿವಾದಿಯ ಸೊಸೆ ಪರ್ವಿನ್ ರವರ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ. ಚೋಟಿಮ ಅಲಿಯಾಸ್ ಅಲಿಯಾಮ್ ಬಿ ರವರು ವಾದಿಗೆ ಯಾವುದೇ ಮರಣ ಶಾಸನ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಯಾವುದೇ ಹಕ್ಕು ಇಲ್ಲದಿದ್ದರೂ ಅವರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿನೆಂದರೆ ಸರಿಯಲ್ಲ. ನೀವು ಸೀಗೇಹಳ್ಳಿ ವಾಸಿಯಾಗಿದ್ದರು ಸಹ ಅಗರ ವಾಸ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ- ಇಲ್ಲ.</u>**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-**

**(ಹರೀಶ್. ಜಿ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**